ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ

2021-22ನೇ ಸಾಲಿನ

(01-04-2021 ರಿಂದ 31-3-2022 ರವರೆಗೆ)

ವಾರ್ಷಿಕ ವರದಿ

I. ಪೀಠಿಕೆ :-

ಚಿಕ್ಕಬಳ್ಳಾಪುರ ನಗರವು ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾ ಕೇಂದ್ರವಾಗಿದ್ದು, 2011 ರ ಜನಗಣತಿಯಂತೆ 63,652 ಜನಸಂಖ್ಯೆಯನ್ನು ಹೊಂದಿರುತ್ತದೆ. ಚಿಕ್ಕಬಳ್ಳಾಪುರ ನಗರಸಭೆಯು ಈ ನಗರಕ್ಕೆ ಸ್ಥಳೀಯ ಸಂಸ್ಥೆಯಾಗಿರುತ್ತದೆ.ಈ ನಗರವು ರಾಜ್ಯದ ರಾಜಧಾನಿ ಬೆಂಗಳೂರಿನಿಂದ 56.ಕಿ.ಮೀ ಹಾಗೂ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿಯಿಂದ 34.ಕಿ.ಮೀ. ಅಂತರದಲ್ಲಿರುತ್ತದೆ. ಬೆಂಗಳೂರು-ಹೈದಾರಬಾದ್ ರಾಷ್ಟ್ರೀಯ ಹೆದ್ದಾರಿ-7 ಹಾಗೂ ರಾಷ್ಟ್ರೀಯ ಹೆದ್ದಾರಿ-234 ಈ ಎರಡು ಹೆದ್ದಾರಿಗಳು ಈ ನಗರದ ಮೂಲಕ ಹಾದು ಹೋಗುವ ಮುಖ್ಯ ಹೆದ್ದಾರಿಗಳಾಗಿದ್ದು, ಈ ನಗರದ ಉತ್ತಮ ಬ್ರಾಡ್ ಗೇಜ್ ರೈಲ್ವೆ ಸಂಪರ್ಕವನ್ನು ಹೊಂದಿರುತ್ತದೆ. ಜಿಲ್ಲೆಯು ವ್ಯಾವಸಾಯ ಪ್ರದೇಶ ಹಾಗೂ ಬೆಟ್ಟ ಶ್ರೇಣಿಗಳಿಂದ ಕೂಡಿರುತ್ತದೆ. ಈ ಜಿಲ್ಲೆಯಲ್ಲಿ ಪ್ರೇಕ್ಷಣೆಯ ತಾಣಗಳಾದ ನಂದಿಬೆಟ್ಟ, ಮುದ್ದೇನಹಳ್ಳಿ, ನಂದಿ ದೇವಸ್ಥಾನ, ರಂಗಸ್ಥಳ ಇತ್ಯಾದಿ ಯಾತ್ರಾಸ್ಥಳಗಳಿದ್ದು ಇಲ್ಲಿಗೆ ಭೇಟಿ ನೀಡುವ ಪ್ರಾವಾಸಿಗರಿಗೆ ಕೇಂದ್ರಸ್ಥಾನವಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಈ ಹಿನ್ನೇಲೆಯಲ್ಲಿ ನಗರವನ್ನು ಯೋಜನಾ ಬದ್ದವಾಗಿ ಅಭಿವೃದ್ಧಿಪಡಿಸುವ ದೃಷ್ಠಿಯಿಂದ ಚಿಕ್ಕಬಳ್ಳಾಪುರ ನಗರವು ಸೇರಿದಂತೆ ಒಟ್ಟು 98 ಗ್ರಾಮಗಳನ್ನು ಸೇರಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಂತೆ ಸ್ಥಳೀಯ ಯೋಜನಾ ಪ್ರದೇಶವೆಂದು ಸರ್ಕಾವು ಘೋಷಿಸಿದ್ದು, ಸದರಿ ಪ್ರದೇಶಕ್ಕೆ ನಗರಾಭಿವೃದ್ಧಿ ಪ್ರಾಧಿಕಾರವು ತನ್ನ ಆರ್ಥಿಕ ಇತಿಮಿತಿಯ ನಡುವೆಯೂ ನಗರವನ್ನು ಸಮಗ್ರ ಮೂಲಭೂತ ಸೌಕರ್ಯಗಳನ್ನೊಳಗೊಂಡ ಯೋಜನಬದ್ದ ಹಾಗೂ ಸುಂದರ ತಾಣವಾಗಿ ರೂಪಿಸಲು ತೊಡಗಿಸಿಕೊಂಡಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:UDD 355 TTP 96 Dated:02.09.1996 ರಲ್ಲಿ ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ವ್ಯಾಪ್ತಿಯನ್ನೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 4(ಎ) ರನ್ವಯ ಸ್ಥಳೀಯ ಯೋಜನಾ ಪ್ರದೇಶವೆಂದು ಮತ್ತು ನಗರಸಭೆ ಚಿಕ್ಕಬಳ್ಳಾಪುರವನ್ನೇ ಯೋಜನಾ ಪ್ರಾಧಿಕಾರವೆಂದು ಘೋಷಿಸಲಾಗಿದ್ದು, ತದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 155 ಬೆಂರೂಪ್ರಾ 2011, ದಿನಾಂಕ:13.12.2011 ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಪಟ್ಟಣಕ್ಕೆ ಹಾಲಿ ಇರುವ (ನಗರಸಭೆ ಯೋಜನಾ ಪ್ರಾಧಿಕಾರವನ್ನು ರದ್ದುಪಡಿಸಿ) ಚಿಕ್ಕಬಳ್ಳಾಪುರ ಯೋಜನಾ ಪ್ರಾಧಿಕಾರವನ್ನು ರಚಿಸಿ ಆದೇಶಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: UDD 336 Bemrupra 2014 Dated:23.03.2015 ರಂದು ಚಿಕ್ಕಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ 1987 ಕಲಂ 3(1) ರನ್ವಯ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವೆಂದು ಘೋಷಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 66 ಬೆಂರೂಪ್ರಾ 2015 ದಿನಾಂಕ:23.03.2015 ರಲ್ಲಿ ಹೊಸದಾಗಿ ರಚಿತವಾದ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಕಲಂ 3(3ಎ) ರಡಿಯಲ್ಲಿ ಅಧ್ಯಕ್ಷರನ್ನು ನಾಮನಿರ್ದೇಶನ ಮಾಡಿ ಆದೇಶಿಸಲಾಗಿರುತ್ತದೆ. ಹಾಗೂ ಸರ್ಕಾರದ ಅಧಿಸೂಚನೆ ಸಂ:ನಅಇ 2017 ಬೆಂರೂಪ್ರಾ 2015 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಕಲಂ 3(3) (ಎಂ) ಮತ್ತು (ಎಲ್) ಹಾಗೂ (4) ರಡಿಯಲ್ಲಿ ಸದಸ್ಯರುಗಳನ್ನು ನಾಮನಿರ್ದೇಶ ಮಾಡಲು ಆದೇಶಿಸಿರುತ್ತದೆ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 82 ಬೆಂರೂಪ್ರಾ 201, ದಿನಾಂಕ:29.04.2015 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 (1987 ಕರ್ನಾಟಕ ಅಧಿನಿಯಮ 34) ಮೂರನೇ ಪ್ರಕರಣದ 4ನೇ ಉಪಪ್ರಕರಣದೊಂದಿಗೆ ಓದಿಕೊಳ್ಳಲಾದ 3ನೇ ಪ್ರಕರಣದ (1ನೇ ಉಪ ಪ್ರಕರಣದ ಅಡಿಯಲ್ಲಿ) ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಿಸಲಾಗುತ್ತದೆ.

II. ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯವಸ್ಥೆ :-

1. ಅಧ್ಯಕ್ಷರು, ಚಿ.ನ.ಅ.ಪ್ರಾ/ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.
2. ಮಾನ್ಯ ಪೊಲೀಸ್ ವರಿಷ್ಠಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
3. ಆಯುಕ್ತರು, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ.
4. ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ.
5. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಬಳ್ಳಾಪುರ.
6. ಸಹಾಯಕ ಕಾರ್ಯಾಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಚಿಕ್ಕಬಳ್ಳಾಪುರ.
7. ಕಾರ್ಯಾಪಾಲಕ ಅಭಿಯಂತರರು, ಕರ್ನಾಟಕ ವಿದ್ಯುತ್ ಸರಾಬರಾಜು ನಿಗಮ ನಿಯಮಿತ, ಚಿಕ್ಕಬಳ್ಳಾಪುರ.
8. ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ.
9. ಜಿಲ್ಲಾ ಆರೋಗ್ಯಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳ ಇಲಾಖೆ, ಚಿಕ್ಕಬಳ್ಳಾಪುರ.

III) ಪ್ರಾಧಿಕಾರದ ಧ್ಯೆಯ ಹಾಗೂ ಉದ್ದೇಶಗಳು :-

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ: UDD 336 Bemrupra 2014 Dated:09.02.2015 ರನ್ವಯ ರಚನೆಯಾಗಿದ್ದು ದಿನಾಂಕ:12.06.2015 ರಿಂದ ಕಾರ್ಯಾರಂಭ ಮಾಡಿರುತ್ತದೆ. ಪ್ರಾಧಿಕಾರವು ಕರ್ನಾಟಕ ನಗರ ಗ್ರಾಮಾಂತರ ಯೋಜನಾ ಕಾಯ್ದೆ-1961 ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987 ರನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆ (ನಗರಸಭೆ ಮತ್ತು ಗ್ರಾಮಪಂಚಾಯಿತಿ)ಗಳಿಗೆ ನಗರ ಯೋಜನಾ ಹಾಗೂ ಇನ್ನಿತರೆ ತಾಂತ್ರಿಕ ವಿಷಯಗಳಲ್ಲಿ ನೆರವು ಹಾಗೂ ಖಾಸಗಿ ಬಡಾವಣೆಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗಿರುತ್ತದೆ. ಸ್ಥಳೀಯ ಯೋಜನಾ ಪ್ರದೇಶದ/ಪ್ರಾಧಿಕಾರದ ವ್ಯಾಪ್ತಿಯಲಗಲಿ ಯೋಜನಾಬದ್ಧವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸುವುದು ಪ್ರಾಧಿಕಾರದ ಮುಖ್ಯ ಧ್ಯೇಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನೀಡಲಾಗುವ ಅನುಮತಿಗಳಿಗೆ ಪ್ರಾಧಿಕಾರವು ಪರಿಶೀಲನಾ ಶುಲ್ಕ ಮತ್ತು ಇತರ ಶಾಸನಬದ್ಧ ಶುಲ್ಕಗಳನ್ನು ಪಾವತಿಸಿಕೊಳ್ಳಲಾಗುತ್ತಿದೆ.

ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಗ್ರಾಮಗಳು :-

ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ನಅಇ 228 ಬೆಂರೂಪ್ರಾ 2014, ಬೆಂಗಳೂರು ದಿನಾಂಕ:06.03.2018 ರಲ್ಲಿ ಚಿಕ್ಕಬಳ್ಳಾಪುರ ಯೋಜನಾ ಪ್ರದೇಶವನ್ನು ಘೋಷಿಸಿದೆ. ಈ ವ್ಯಾಪ್ತಿಯ ಒಟ್ಟು ವಿಸ್ತೀರ್ಣ 17078.65 ಹೆಕ್ಟೇರ್ ಗಳಾಗಿದ್ದು ಈ ಕೆಳಕಂಡ ಗ್ರಾಮಗಳನ್ನು ಒಳಗೊಂಡಿರುತ್ತದೆ.

1	ಚಿಕ್ಕಬಳ್ಳಾಪುರ ನಗರ	21	ಮರಸನಹಳ್ಳಿ	41	ಪಟ್ರೇನಹಳ್ಳಿ	61	ನಕ್ಕಲಬಚ್ಚಹಳ್ಳಿ	81	ಕುಪ್ಪಹಳ್ಳಿ
2	ಜಡಲತಿಮ್ಮನಹಳ್ಳಿ	22	ಆಕಲತಿಮ್ಮನಹಳ್ಳಿ	42	ಅಮಾನಿಗೋಪಾಲಕೃಷ್ಣಕೆರೆ	62	ಬೊಮ್ಮನಹಳ್ಳಿ	82	ಕುಡುವತಿ
3	ವಾಪಸಂದ್ರ	23	ಆವಲಗುರ್ಕಿ	43	ಮರಿಮಾಕಲಹಳ್ಳಿ	63	ಹಿರೇಪಡೆ	83	ಅಂಗಟ್ಟ
4	Lower Orchirds of Sidlagatta	24	ಅರಿಕೆರೆ	44	ಮುತ್ತಕದಹಳ್ಳಿ	64	ಕಡಪೀಗನೇಹಳ್ಳಿ	84	ಅರಸನಹಳ್ಳಿ
5	ಅಂಕಣಗೊಂದಿ - (ಭಾಗಶಃ)	25	ಲಿಂಗಶೆಟ್ಟಿಪುರ	45	ಅಂದಾರ್ಳ	65	ಗೊಲ್ಲಪಡೆ	85	ಕೊತ್ತನೂರು
6	ಗಂಗನಮಿದ್ದೆ	26	ಕವರನಹಳ್ಳಿ	46	ತಾಂಡ್ರಮರದಹಳ್ಳಿ	66	ತಮ್ಮನಹಳ್ಳಿ	86	ತಿರ್ನಹಳ್ಳಿ
7	Lower Orchirds of Ankangundi	27	ಗೇರಹಳ್ಳಿ	47	ಅಡವಿಗೊಲ್ಲವಾರಹಳ್ಳಿ	67	ಅಲಗುರ್ಕಿ	87	ತುಮಕಲಹಳ್ಳಿ
8	ಕಂದವಾರ	28	ಹೊನ್ನೇಹಳ್ಳಿ	48	ಅಣಕನೂರು	68	ಚೀಡಚಿಕ್ಕನಹಳ್ಳಿ	88	ಮಾವಹಳ್ಳಿ
9	ತಿಪ್ಪೇನಹಳ್ಳಿ	29	ಸೂಲಿಕುಂಟೆ	49	ಅಜ್ಜವಾರ	69	ಚೊಕ್ಕಹಳ್ಳಿ	89	ಚಿಕ್ಕಸಾಗರಹಳ್ಳಿ
10	ದಿನ್ನೇಹೊಸಹಳ್ಳಿ	30	ನಡುವನಹಳ್ಳಿ	50	ಸೊಣ್ಣಪುರ	70	ಚಿಕ್ಕಕಾಡಿಗಾನಹಳ್ಳಿ	90	ನಂದಿ
11	ನಲ್ಲೇನಹಳ್ಳಿ	31	ಗುವ್ವಲಕಾನಹಳ್ಳಿ	51	ನಾಯನಹಳ್ಳಿ	71	ಶ್ರೀರಾಂಪುರ	91	ನಾರಮ್ಮನಹಳ್ಳಿ
12	ಬೈರೋಜನಹಳ್ಳಿ	32	ದೇವಸ್ಥಾನಹೊಸಹಳ್ಳಿ	52	ಮನ್ನಾರಪುರ	72	ಜಡಲತಿಮ್ಮನಹಳ್ಳಿ (ಚಲುವತಿಮ್ಮಹಳ್ಳಿ)	92	ಮುದ್ದೇನಹಳ್ಳಿ
13	ಪಾವಂಡಹಳ್ಳಿ	33	ಮಂಚನಬಲೆ	53	ದೊಡ್ಡಕಿಉಗಂಬಿ	73	ದೊಡ್ಡಮರಳಿ	93	ಕಳವಾರ - (ಭಾಗಶಃ)
14	ಮೂಸ್ಕೂರು	34	ಗುಂಡ್ಲಗುರ್ಕಿ	54	ನುಗ್ಗಿತಹಳ್ಳಿ	74	ಚದಲಪುರ	94	ಮೈಲಪ್ಪನಹಳ್ಳಿ
15	ಕಣಜೇನಹಳ್ಳಿ	35	ಮಂಚನಬಲೆಅಮಾನಿಕೆರೆ	55	ಬನ್ನಿಕುಪ್ಪೆ	75	ಬೀಡಗಾನಹಳ್ಳಿ	95	ಗಂಟಿಗಾನಹಳ್ಳಿ
16	ಅಂಕಣಗೊಂದಿ - (ಭಾಗಶಃ)	36	ಸಬ್ಬೇನಹಳ್ಳಿ	56	ವರದಹಳ್ಳಿ	76	ಕೊಳವನಹಳ್ಳಿ	96	ಬಂಡಹಳ್ಳಿ
17	ಹಾರೋಬಂಡೆ	37	ಪುಟ್ಟತಿಮ್ಮನಹಳ್ಳಿ	57	ಕೋಂಡನಹಳ್ಳಿ	77	ದೇವಿಶೆಟ್ಟಿಹಳ್ಳಿ	97	ಚಿಕ್ಕಮುದ್ದೇನಹಳ್ಳಿ
18	ಗೊಂಡಿಹಳ್ಳಿ	38	ಹಿತಮಾಕಲಹಳ್ಳಿ	58	ಸಾಂಬರುಗಿಡದಕಾವಲು	78	ವರಮಲ್ಲೇನಹಳ್ಳಿ	98	ಬಚ್ಚಹಳ್ಳಿ
19	ಹುನೇಗಲ್ಲು	39	ಕಾಮಶೆಟ್ಟಿಹಳ್ಳಿ	59	ಕಣಿತಹಳ್ಳಿ	79	ದೊಡ್ಡಮರಳಿಅಮಾನಿಕರೆ		
20	ಬೂರಮಾಕನಹಳ್ಳಿ	40	ಅಮಾನಿಮಾವುಕೆರೆ	60	ತೌಡನಹಳ್ಳಿ	80	ಯಲುವಹಳ್ಳಿ		

2021-22 ನೇ ಸಾಲಿಗೆ ಒದಗಿಸಿದ ಆಯವ್ಯಯದ ಸಂಕ್ಷೀಪ್ತ ವಿವರ :-

ಕ್ರ.ಸಂ.	ವಿವರ	2021-22ನೇ ಸಾಲಿಗೆ ನಿರೀಕ್ಷಿತ ಆದಾಯ ರೂ.	2021-22ನೇ ಸಾಲಿಗೆ ನಿರೀಕ್ಷಿತ ವೆಚ್ಚ ರೂ.
1.	2021-22 ನೇ ಸಾಲಿನ ಆಯವ್ಯಯ ಹಾಗೂ ಹೊಂದಿಕೊಂಡಂತೆ ವೆಚ್ಚಗಳು.	2,45,35,000/-	1,73,72,000/-

2022-23ನೇ ಸಾಲಿನ ವಾರ್ಷಿಕ ವರದಿಯ ಗುರಿಗಳು ಮತ್ತು ಸಾಧನೆಗಳು :-

1. **ಮಹಾಯೋಜನೆ ಪರಿಷ್ಕರಣೆ-1 :-**

ಸರ್ಕಾರದ ಆದೇಶ ಸಂಖ್ಯೆ:ನಅಇ 74 ಬೆಂರೂಪ್ರಾ 2022 ಬೆಂಗಳೂರು ದಿನಾಂಕ:18.11.2022 ರಂದು ಚಿಕ್ಕಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪ್ರ-1)ಗೆ ಅಂತಿಮ ಅನುಮೋದನೆ ನೀಡಲಾಗಿರುತ್ತದೆ.

2. **ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಆರ್ಥಿಕ/ಭೌತಿಕ ಪ್ರಗತಿ :-**

ಗಂಗನಮಿದ್ದೆ ಗ್ರಾಮದ ಸ.ನಂ.270 ರ 0ಎಕರೆ-31ಗುಂಟೆ ಪೈಕಿ 0ಎಕರೆ-24.08ಗುಂಟೆ ವಿಸ್ತೀರ್ಣದ ಕಂದವಾರ ಕೆರೆ ಏರಿ ಬದಿಯಲ್ಲಿ ಎಕೋ ಥೀಮ್ ಪಾರ್ಕ್‌ನ್ನು ಪ್ರಾಧಿಕಾರದಲ್ಲಿ ಪಾವತಿಸಿಕೊಳ್ಳಲಾಗುವ ಕೆರೆ ಪುನರುಜ್ಜೀವನ ಶುಲ್ಕದಿಂದ ಅಭಿವೃದ್ಧಿಪಡಿಸಲಾಗುತ್ತಿದ್ದು, ದಿನಾಂಕ:17.02.2021 ರಂದು ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿರುತ್ತದೆ.

ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದೆ ಇಡಲಾದ ಕಾಗದ ಪತ್ರಗಳ ಸಮಿತಿ

ವಾರ್ಷಿಕ ವರದಿ ನಮೂನೆ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ

ವರ್ಷ	ವಾರ್ಷಿಕ ವರದಿಯನ್ನು ಸಿದ್ಧಪಡಿಸಿದ ದಿನಾಂಕ	ವಿಳಂಬಕ್ಕೆ ಯಾವುದಾದರೂ ಕಾರಣಗಳು ಇದ್ದರೆ	ವಾರ್ಷಿಕ ವರದಿಯನ್ನು ಅಚ್ಚಿಗಾಗಿ ನೀಡಿದ ದಿನಾಂಕ	ವಾರ್ಷಿಕ ವರದಿಯನ್ನು ಸ್ವೀಕರಿಸಿದ ದಿನಾಂಕ	ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲು ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಹಾಗೂ ದಿನಾಂಕ	ಶಾಸಕಾಂಗ ಸಭೆಯಲ್ಲಿ ಮಂಡಿಸಲು ಉಂಟಾದ ವಿಳಂಬಕ್ಕೆ ಕಾರಣಗಳು
1	2	3	4	5	6	7
2021-22		ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಆಡಳಿತ ಶಾಖೆಯಲ್ಲಿ ಹಾಗೂ ಲೆಕ್ಕ ಪತ್ರ ಶಾಖೆಯಲ್ಲಿ ಯಾವುದೇ ಸಿಬ್ಬಂದಿಗಳು ಇರುವುದಿಲ್ಲ			ಪ್ರಾಧಿಕಾರದ ಪತ್ರ ಸಂಖ್ಯೆ:ಚಿ.ನ.ಅ.ಪ್ರಾ/ಚಿ.ಬ/ವಾ.ವ /07/2021-22 ದಿನಾಂಕ:__.06.2023	-

-ಸಹಿ-
ಆಯುಕ್ತರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ.